

ನಿರ್ಮಾಣದ ಹಂತದಲ್ಲಿರುವ ದೇವಸ್ಥಾನದ ಕಟ್ಟಡ

# ರಾಮಕೃಷ್ಣ ಮಿಷನ್, ಕಡಪ

(ರಾಮಕೃಷ್ಣ ಮಿಷನ್, ಬೇಲೂರು ಮಠ, ಹೌರಾ ಜಿಲ್ಲೆ, ಪಶ್ಚಿಮ ಬಂಗಾಳ 711 202 ಇದರ ಶಾಖಾ ಕೇಂದ್ರ)
ಸಿಟಿ ಕೇಂದ್ರ : ರಾಮಕೃಷ್ಣ ಮಠ, ಟ್ರಂಕ್ ರೋಡ್, ಕಡಪ 516 001
Ph : 241633 Email: kadapamath@yahoo.com Web Site: www.rkm-kadapa.org

## ಭಗವಾನ್ ಶ್ರೀರಾಮಕೃಷ್ಣರಿಗೆ ನಿವೇದಿತವಾದ ವಿಶ್ವಭಾವೈಕ್ಯ ದೇವಮಂದಿರ

ದಿವ್ಯತ್ರಯರ ಅನುಗ್ರಹದಿಂದ ಶ್ರೀರಾಮಕೃಷ್ಣರಿಗೆ ಮುಡಿಪಾದ ವಿಶ್ವಭಾವೈಕ್ಯ ಮಂದಿರದ ಕಟ್ಟಡ ನಿರ್ಮಾಣವು ಕಡಪ ಆಶ್ರಮದಲ್ಲಿ ಪೂರ್ಣವಾಗುತ್ತಲಿದೆ. ನಿಮಗೆ ಈಗಾಗಲೆ ಗೊತ್ತಿರುವ ಹಾಗೆ, ಈ ಮಂದಿರದ ಅಂದಾಜು ವೆಚ್ಚ ರೂ. 140 ಲಕ್ಷಗಳು. ಆದರೆ ಸಂಪೂರ್ಣವಾಗುವ ವೇಳೆಗೆ ನಾವು ಇನ್ನೂ 20 ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡಬೇಕಾಗಿದೆ. ಈ ಮಂದಿರದ ಉದ್ಘಾಟನೆ ಮತ್ತು ಭಗವಾನ್ ಶ್ರೀರಾಮಕೃಷ್ಣರ ಅಮೃತಶಿಲೆಯ ವಿಗ್ರಹದ ಪ್ರತಿಷ್ಠಾಪನೆಯನ್ನು 2012, ನವೆಂಬರ್ 22ರ ಪವಿತ್ರ ಜಗದ್ಧಾತ್ರಿ ಪೂಜೆಯ ದಿನದಂದು ನೆರವೇರಿಸಲು ಸಂಕಲ್ಪಿಸಲಾಗಿದೆ. ಈ ಸಂದರ್ಭ, ನವೆಂಬರ್ 20ರಿಂದ 23ರವರೆಗೆ 4 ದಿನಗಳ ಕಾಲ ಮಹೋತ್ಸವವನ್ನು ಆಯೋಜಿಸಲಾಗಿದೆ. ದಿವ್ಯತ್ರಯರ ಭಕ್ತರು ಮತ್ತು ಹಿತೈಷಿಗಳಿಗೆ, ಈ ಸಮಾರಂಭದಲ್ಲಿ ಭಾಗವಹಿಸಲು ಹಾರ್ದಿಕವಾದ ಸುಸ್ವಾಗತವನ್ನು ಬಯಸುತ್ತೇವೆ.

ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಈ ಮಹೋತ್ಸವದಲ್ಲಿ ದಿವ್ಯ ಸಾನ್ನಿಧ್ಯವನ್ನು ವಹಿಸಿ, ಪೂಜಾಮಂದಿರದ ಉದ್ಘಾಟನೆಯನ್ನು ನೆರವೇರಿಸಲು ದಯವಿಟ್ಟು ಒಪ್ಪಿಕೊಂಡಿರುತ್ತಾರೆ. ಸುಮಾರು 250 ಸಾಧು ಬ್ರಹ್ಮಚಾರಿಗಳು ಮತ್ತು 5000 ಭಕ್ತರು (ಕಡಪ ನಗರದ ಹೊರಗಿನಿಂದ ಸುಮಾರು 2000 ಭಕ್ತರು ಆಗಮಿಸುವ ನಿರೀಕ್ಷೆಯಿದೆ) ಈ ಮಹೋತ್ಸವದಲ್ಲಿ ಪಾಲ್ಗೊಳ್ಳುವರು. ವಾಸ್ತುಹೋಮ, ವಿಶೇಷ ಪೂಜೆ, ಸಾಧು ಬ್ರಹ್ಮಚಾರಿಗಳು ಮತ್ತು ಭಕ್ತರನ್ನು ಒಳಗೊಂಡ ಶೋಭಾಯಾತ್ರೆ, ಹಿರಿಯ ಸಂನ್ಯಾಸಿಗಳು ಮತ್ತು ಇತರ ಗಣ್ಯವ್ಯಕ್ತಿಗಳಿಂದ ಪ್ರವಚನಗಳು, ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಸಂಚಿಕೆಯ ಬಿಡುಗಡೆ – ಇವು ಮಹೋತ್ಸವದ ಅಂಗಗಳಾಗಿರುತ್ತವೆ. ಈ ಕಾರ್ಯಕ್ರಮಗಳಿಗೆ ಒಟ್ಟಾರೆ ರೂ. 45 ಲಕ್ಷಗಳಷ್ಟು ಖರ್ಚಾಗುವುದು ಎಂದು ಅಂದಾಜು ಮಾಡಲಾಗಿದೆ. ಈ ಪವಿತ್ರಕಾರ್ಯದಲ್ಲಿ ನಮ್ಮೊಡನೆ ತನು ಮನ ಧನಗಳ ಮೂಲಕ ಸಹಕರಿಸಿ, ಈ ಸಮಾರಂಭವನ್ನು ಅದ್ದೂರಿಯಾಗಿ ಮತ್ತು ಸ್ಮರಣೀಯವಾಗಿ ನಡೆಸಿಕೊಡಬೇಕೆಂದು ಮತ್ತು ಆ ಮೂಲಕ ದಿವ್ಯತ್ರಯರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ನಮ್ಮೆಲ್ಲ ಭಕ್ತರಿಗೆ ಮತ್ತು ಹಿತೈಷಿಗಳಿಗೆ ನಮ್ಮ ವಿನಮ್ರ ವಿನಂತಿ.

ದೇಣಿಗೆಗಳನ್ನು 'Ramakrishna Mission, Kadapa' ಹೆಸರಿಗೆ ಬರೆದ ಚೆಕ್ ಮತ್ತು ಡ್ರಾಫ್ಟ್‌ಗಳ ಮೂಲಕ ಮೇಲಿನ ವಿಳಾಸಕ್ಕೆ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇವೆ. ತಾವು State Bank of India ದಲ್ಲಿರುವ ನಮ್ಮ ಖಾತೆಗೆ ನೇರವಾಗಿ E – transfer ಮಾಡುವ ಮೂಲಕವೂ ನಿಮ್ಮ ಕೊಡುಗೆಗಳನ್ನು ಸಲ್ಲಿಸಬಹುದು. ಅದರ ವಿವರಗಳು ಹೀಗಿವೆ: Ramakrishna Mission A/c No 30186936408 at SBI, RIMS Branch, Cuddapah. Bank code : SBIN 0010107. ತಾವು ಹಣವನ್ನು E- transfer ಮಾಡುವಾಗ ದಯವಿಟ್ಟು ನಿಮ್ಮ ಸಂಪೂರ್ಣ ಹೆಸರು ಮತ್ತು ವಿಳಾಸಗಳನ್ನೂ, ಹಾಗೆಯೇ ತಾವು ಸಲ್ಲಿಸುತ್ತಿರುವ ಮೊಬಲಗಿನ ವಿವರವನ್ನೂ ನಮಗೆ ತಿಳಿಸಬೇಕಾಗಿ ಪ್ರಾರ್ಥಿಸುತ್ತೇವೆ. ಇದರಿಂದಾಗಿ ನಮ್ಮ ಖಾತೆಯಲ್ಲಿ ಆ ಹಣವನ್ನು ಸ್ವೀಕರಿಸಲು ಮತ್ತು ಅಧಿಕೃತ ರಸೀದಿಯನ್ನು ನಿಮಗೆ ಕಳುಹಿಸಿಕೊಡಲು ಅನುಕೂಲವಾಗುತ್ತದೆ.

ಸ್ವಾಮಿ ಆತ್ಮವಿದಾನಂದ
ಕಾರ್ಯದರ್ಶಿಗಳು

ಸಂಪಾದಕೀಯ

## ಜನಚೇತನವನ್ನು ಬಡಿದೆಬ್ಬಿಸಿದ

# ರಾಷ್ಟ್ರೋದ್ಧಾರಕನ ಮಿಂಚಿನ ನುಡಿಗಳು



ಸ್ವಾಮಿ ವಿವೇಕಾನಂದರು ನಾಲ್ಕು ವರ್ಷಗಳ ಕಾಲ ಪಾಶ್ಚಾತ್ಯ ಜಗತ್ತಿನ ಪ್ರವಾಸ ಮಾಡಿದರು. ಅವರು ೧೮೯೭ ನೆಯ ಜನವರಿ ೧೫ ರಂದು ಕೊಲೊಂಬೋಗೆ ಬಂದಿಳಿದರು. ಪಾಶ್ಚಾತ್ಯ ಜಗತ್ತಿನಲ್ಲಿ ಅವರ ಘನಕಾರ್ಯ ಅಂದಿಗೆ ಮುಗಿದಿತ್ತು. ಆದರೆ ಅಂದೇ ಅವರು ತಮ್ಮ ಜೀವಿತಕಾಲದ ಇನ್ನೊಂದು ಮಹಾನ್ ಕಾರ್ಯವನ್ನು ಕೈಗೊಂಡರು. ಅದೆಂದರೆ ತಮ್ಮ ತಾಯ್ನಾಡಿನ ಜನರಲ್ಲಿ ಆತ್ಮಾಭಿಮಾನವನ್ನು ತುಂಬುವುದು, ದೇಶಭಕ್ತಿಯನ್ನು ಉದ್ದೀಪಿಸುವುದು ಮತ್ತು ರಾಷ್ಟ್ರೀಯ ದೌರ್ಬಲ್ಯಗಳ ಬಗ್ಗೆ ಜನರ ಗಮನ ಸೆಳೆಯುವುದು. ಈ ರಾಷ್ಟ್ರಜಾಗೃತಿಯ ಕಾರ್ಯವನ್ನು ಸ್ವಾಮೀಜಿ ಆರಂಭಿಸಿದ್ದು ಕೊಲಂಬೋದಲ್ಲಿ. ಇಲ್ಲಿ ಆರಂಭಿಸಿದ ಈ ರಾಷ್ಟ್ರೋದ್ಧಾರ ಕಾರ್ಯವನ್ನು ಸ್ವಾಮೀಜಿ ಹಿಮಾಲಯದ ಶಿಖರದಲ್ಲಿರುವ ಆಲ್ಮೋರಾದವರೆಗೂ ಮುಂದುವರೆಸಿದರು. ನಾಡಿನಾದ್ಯಂತ ಸಂಚರಿಸಿ, ಈ ರಾಷ್ಟ್ರದ ಸುಪ್ತಾತ್ಮವನ್ನು ಎಚ್ಚರಿಸಿದರು; ರಾಷ್ಟ್ರೋದ್ಧಾರದ ಕಾರ್ಯಕ್ಕೆ ಚೈತನ್ಯವನ್ನು ತುಂಬಿ ಸಮರ್ಪಕ ಮಾರ್ಗದರ್ಶನ ಮಾಡಿದರು. ಈ ಅವಧಿಯಲ್ಲಿ ಮಾಡಿದ ಭಾಷಣಗಳು ಸ್ವಾಮಿ ವಿವೇಕಾನಂದರ ಸಾಹಿತ್ಯ ಶ್ರೇಣಿಯಲ್ಲಿ ವಿಶಿಷ್ಟ ಸ್ಥಾನ ಹೊಂದಿವೆ. ಭಾರತದ ಪ್ರತಿಯೊಬ್ಬ ಪ್ರಜೆಯೂ, ಅದರಲ್ಲೂ ಪ್ರತಿಯೊಬ್ಬ ಯುವಕನೂ ಅತ್ಯವಶ್ಯವಾಗಿ ಅಧ್ಯಯನ ಮಾಡಬೇಕಾದ ಭಾಷಣಗಳಿವು. ವ್ಯಕ್ತಿಗತ ಚಾರಿತ್ರ್ಯ ನಿರ್ಮಾಣಕ್ಕೆ, ಸಮಷ್ಟಿಗತ ರಾಷ್ಟ್ರನಿರ್ಮಾಣಕ್ಕೆ ಬಹು ಅಗತ್ಯವಾದ ಆಲೋಚನಾಸರಣಿಯನ್ನು ಇವು ಹೊಂದಿವೆ. **'ಕೊಲೊಂಬೋದಿಂದ ಆಲ್ಮೋರಾಕ್ಕೆ'** ಎಂಬ ಶೀರ್ಷಿಕೆಯ ಅಡಿಯಲ್ಲಿರುವ ಈ ಭಾಷಣಗಳನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಬಹುದು: **೧. ಶ್ರೀಲಂಕಾ ಮತ್ತು ತಮಿಳುನಾಡಿನಲ್ಲಿ ಮಾಡಿದ ಭಾಷಣಗಳು. ೨. ಚೆನ್ನೈನಲ್ಲಿ ಮಾಡಿದ ಪ್ರವಚನಗಳು. ೩. ಕೊಲ್ಕತಾದಲ್ಲಿ ಮಾಡಿದ ಭಾಷಣಗಳು** ಮತ್ತು **೪. ಉತ್ತರ ಭಾರತದಲ್ಲಿ ಮಾಡಿದ ಪ್ರವಚನಗಳು.** ಮೊದಲು ನಾವು ಶ್ರೀಲಂಕಾ ಮತ್ತು ತಮಿಳುನಾಡಿನ ವಿವಿಧ ಕಡೆಗಳಲ್ಲಿ ಸ್ವಾಮೀಜಿಯವರು ಮಾಡಿದ ಭಾಷಣಗಳ ಸಾರಾಂಶವನ್ನು ಅರಿಯಲು ಪ್ರಯತ್ನಿಸೋಣ.

**ಪರಮಪವಿತ್ರ ಮಾತೃಭೂಮಿ :** ಭಾರತದ ದಕ್ಷಿಣದಂಚಿನಲ್ಲಿ ನಿಂತು ಸ್ವಾಮಿ ವಿವೇಕಾನಂದರು ಭಾಷಣ ಮಾಡುತ್ತಿದ್ದಾರೆ. ಅವರು ನಾಲ್ಕು ವರ್ಷಗಳ ಕಾಲ ಪಾಶ್ಚಾತ್ಯ ಜಗತ್ತಿನಲ್ಲಿ ಪ್ರವಾಸ ಮಾಡಿಕೊಂಡು ಬಂದಿದ್ದರೂ ಮಾತೃಭೂಮಿಯ ಬಗ್ಗೆ ಅವರಿಗೆ ಇರುವ ನಿಷ್ಠೆ ಸ್ವಲ್ಪವೂ ಕಡಿಮೆಯಾಗಿಲ್ಲ, ಅದಕ್ಕೆ ಬದಲಾಗಿ ಅಧಿಕವೇ ಆಗಿದೆ. ಹಾಗೆಂದೇ ಸ್ವಾಮೀಜಿ ಹೀಗೆ ಘೋಷಿಸುತ್ತಾರೆ: "ಜಗತ್ತಿನಲ್ಲಿ ಯಾವುದಾದರೂ ಒಂದು ದೇಶವು ಪುಣ್ಯಭೂಮಿಯೆಂದು ಕರೆಯಿಸಿಕೊಳ್ಳಲು ಅರ್ಹವಾಗಿದ್ದರೆ, ಜೀವಿಗಳು ತಮ್ಮ ಬಾಳಿನ ಕೊನೆಯ ಕರ್ಮವನ್ನು ಸವೆಸಲು ಬರಬೇಕಾದ ಸ್ಥಳವೊಂದಿದ್ದರೆ, ಭಗವಂತನೆಡೆಗೆ ಸಂಚರಿಸುತ್ತಿರುವ ಪ್ರತಿಯೊಬ್ಬ ಜೀವಿಯೂ ತನ್ನ ಕೊನೆಯ ಯಾತ್ರೆಯನ್ನು ಪೂರೈಸುವುದಕ್ಕೆ ಒಂದು ಕರ್ಮಭೂಮಿಗೆ ಬರಬೇಕಾಗಿದ್ದರೆ, ಯಾವುದಾದರೂ ದೇಶದಲ್ಲಿ ಮಾನವಕೋಟಿಯ ಮಾಧುರ್ಯ, ಔದಾರ್ಯ, ಪಾವಿತ್ರ್ಯ, ಶಾಂತಿ – ಇವುಗಳಲ್ಲಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಧ್ಯಾನದಲ್ಲಿ ಮತ್ತು ಅಂತರ್ಮುಖ ಜೀವನದಲ್ಲಿ ತನ್ನ ಪರಾಕಾಷ್ಠೆಯನ್ನು ಮುಟ್ಟಿದ್ದರೆ ಅದು ಭರತಖಂಡವೇ ಆಗಿದೆ."

**ಭಾರತೀಯರ ಆತ್ಮ – ಧರ್ಮ :** ಇತಿಹಾಸದ ದಾಖಲೆಗೆ ನಿಲುಕದ ಪ್ರಾಚೀನಕಾಲದಿಂದಲೂ ಇಲ್ಲಿ ಒಂದು ಭವ್ಯ ಸಂಸ್ಕೃತಿ ನೆಲೆಗೊಂಡಿತ್ತು ಎಂದು ಸ್ವಾಮೀಜಿ ಹೇಳುತ್ತಾರೆ. ಅನಾದಿಕಾಲದಿಂದ

ಮಹೋನ್ನತ ಭಾವನೆಗಳ ಒಂದು ಪರಂಪರೆ ಇಲ್ಲಿಂದ ಇಡೀ ವಿಶ್ವದಾದ್ಯಂತ ಹೊರಹೊಮ್ಮಿದೆ. ಆ ಭಾವನಾ ಪರಂಪರೆ ಆಧ್ಯಾತ್ಮಿಕತೆಗೆ ಸೇರಿದ್ದು, ಧರ್ಮಕ್ಕೆ ಸೇರಿದ್ದು. ಸ್ವಾಮೀಜಿಯವರ ಪ್ರಕಾರ ಈ ದೇಶವು ಇನ್ನೂ ಉಳಿದಿರುವುದಕ್ಕೆ ಕಾರಣವೆಂದರೆ ಧರ್ಮವೇ ರಾಷ್ಟ್ರಜೀವನದ ಚಿಲುಮೆಯಾಗಿರುವುದು, ಧರ್ಮವೆಂಬ ಹೃದಯದಲ್ಲಿಯೇ ಈ ರಾಷ್ಟ್ರದ ನಾಡಿಗಳಲ್ಲಿ ಹರಿಯುವ ರಕ್ತ ಸಂಚರಿಸುತ್ತಿರುವುದು. ಒಟ್ಟಿನಲ್ಲಿ ಹೇಳುವುದಾದರೆ ಭರತಖಂಡದಲ್ಲಿ ಧರ್ಮವೇ ಏಕಮಾತ್ರ ವ್ಯವಹಾರ. ಹೀಗಾಗಿ ಭಾರತವು ಇಡೀ ವಿಶ್ವಕ್ಕೆ ಕೊಡಬೇಕಾದ ಕೊಡುಗೆಯೆಂದರೆ ಈ ಧರ್ಮವೇ, ಈ ಆಧ್ಯಾತ್ಮಿಕ ಜೀವನವೇ. ಇದು ಮಾನವಕೋಟಿಯ ಪ್ರಗತಿಗೆ ಅತ್ಯವಶ್ಯವಾದುದು. ಶಾಂತಿಪರಾಯಣನಾದ ಭಾರತೀಯನು ಕೊಡಬಲ್ಲ, ಕೊಡಬೇಕಾದ ಕಾಣಿಕೆ ಇದೊಂದೇ ಎಂದು ಸ್ವಾಮೀಜಿ ಹೇಳುತ್ತಾರೆ. ಈ ದೃಷ್ಟಿಯಿಂದ ನೋಡುವುದಾದರೆ ನಮ್ಮ ರಾಷ್ಟ್ರೀಯ ಧ್ಯೇಯವೇ, ಇಡೀ ಜನಾಂಗದ ಆಧ್ಯಾತ್ಮಿಕ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ, ಕೇಂದ್ರೀಕರಿಸಿ, ಸಮಯ ಬಂದಾಗ ಆ ಮಹಾಪ್ರವಾಹದಿಂದ ಜಗತ್ತೆಲ್ಲವನ್ನೂ ಮುಳುಗಿಸುವುದು.

ಇಂದಿಗೂ ಭಾರತೀಯ ಚಿಂತನೆಯು ಪ್ರಸ್ತುತ ಎಂದು ಸ್ವಾಮೀಜಿ ಪ್ರತಿಪಾದಿಸುತ್ತಾರೆ. ಅವರ ಪ್ರಕಾರ ಮಾನವನ ಅತಿ ಅದ್ಭುತ ಕೃತಿಯೆಂದರೆ ಉಪನಿಷತ್ತುಗಳು. ಯುಕ್ತಿಪೂರ್ಣವಾದ, ವಿಶಾಲವಾದ, ಭವ್ಯವಾದ ಭಾವನೆಗಳು ಉಪನಿಷತ್ತುಗಳಲ್ಲಿ ಮಾತ್ರ ದೊರೆಯುತ್ತವೆ. ಆಧುನಿಕ ಕಾಲದಲ್ಲಿ ಈ ಭಾವನೆಗಳು ಮಾತ್ರವೇ ಸುಸಂಸ್ಕೃತ ಮಾನವಕುಲಕ್ಕೆ ಶ್ರದ್ಧಾಭಕ್ತಿಗಳನ್ನು ಕೊಡಬಲ್ಲವು. ಸಾವಿರಾರು ವರ್ಷಗಳ ಹಿಂದೆ ಅವು ಹೇಗೆ ಮಾನವನ ಹಿತಕ್ಕೆ ಪ್ರಯೋಜನಕಾರಿಯಾಗಿದ್ದವೋ ಹಾಗೆಯೇ ಈಗಲೂ ಆಗಿವೆ. ನಮ್ಮ ದೇಶವು ಪರಕೀಯರ ಧಾಳಿಗೆ ತುತ್ತಾಗಿದ್ದಾಗಲೂ, ತಾನು ಉಳಿಸಿಕೊಂಡು ಬಂದಿರುವ ಅನರ್ಘ್ಯ ರತ್ನಗಳೆಂದರೆ, ಧರ್ಮ ಮತ್ತು ಅಧ್ಯಾತ್ಮ. ಪಾಶ್ಚಾತ್ಯ ನಾಗರಿಕತೆಯ ನಯನಾಜೂಕುಗಳೆಲ್ಲವೂ ಬರಿಯ ಭ್ರಾಂತಿ. ಅವೆಲ್ಲವೂ ನಿಸ್ಸಾರ. ಹೀಗಾಗಿ, "ಅಧ್ಯಾತ್ಮವೊಂದನ್ನೇ ನೆಚ್ಚಿ, ನೀವು ಜಗತ್ತಿಗೆ ಬೋಧಿಸಬೇಕಾಗಿರುವುದು ಈ ಆಧ್ಯಾತ್ಮಿಕತೆಯೊಂದೇ" ಎಂದು ಸ್ವಾಮೀಜಿ ಭಾರತೀಯರಿಗೆ ಕರೆ ಕೊಡುತ್ತಾರೆ. ಆಧ್ಯಾತ್ಮಿಕ ಆಹಾರಕ್ಕಾಗಿ ಇಡಿಯ ಜಗತ್ತು ಭರತಖಂಡದ ಕಡೆ ನೋಡುತ್ತಿದೆ. ಆಧ್ಯಾತ್ಮಿಕ ತಳಹದಿ ಇಲ್ಲದೆ ಇದ್ದರೆ, ಪಾಶ್ಚಾತ್ಯ ಸಂಸ್ಕೃತಿ ನುಚ್ಚುನೂರಾಗುವುದು. ಯೂರೋಪನ್ನು ಸಂರಕ್ಷಿಸುವುದೇ ಉಪನಿಷತ್ತಿನ ಧರ್ಮ. ಹೀಗಾಗಿ ಮಾನವ ಅಸ್ತಿತ್ವದ ಸಮಸ್ಯೆಗಳನ್ನು ಬಗೆಹರಿಸಲು ಸಿದ್ಧರಾಗುವ ಒಂದು ಗುರುತರ ಕರ್ತವ್ಯ ಭರತಖಂಡದ ಜನರ ಮೇಲೆ ಬಿದ್ದಿದೆ. ಆದ್ದರಿಂದ ಅವುಗಳನ್ನು ಎಲ್ಲೆಡೆ ಪಸರಿಸುವ ಜವಾಬ್ದಾರಿ ಮತ್ತು ಉತ್ತರದಾಯಿತ್ವ ಭಾರತೀಯರದಾಗಿದೆ. ಇದುವೇ ಜಗತ್ತಿನ ರಂಗದಲ್ಲಿ ಭಾರತೀಯರು ನಿರ್ವಹಿಸಬೇಕಾದ ಪಾತ್ರ ಎಂಬುದು ಸ್ವಾಮೀಜಿಯವರ ಅಭಿಪ್ರಾಯ.

**ಧರ್ಮಸಹಿಷ್ಣುತೆ – ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ :** ಭಾರತವು ಇತಿಹಾಸದುದ್ದಕ್ಕೂ ಅನ್ಯಮತಸಹಿಷ್ಣುವಾಗಿಯೇ ಇರುವುದನ್ನು ನೋಡುತ್ತೇವೆ. ಇತರ ದೇಶಗಳಲ್ಲಿ ದೇವರುಗಳ ಹೆಸರಿನಲ್ಲಿ ಕಲಹ, ಯುದ್ಧ ನಡೆಯುತ್ತಿತ್ತು. ಆದರೆ ಈ ದೇಶದ ಮತ್ತು ಪ್ರಪಂಚದ ಒಂದು ಮಹಾಭಾಗ್ಯವೆಂದರೆ, ಅಂತಹ ಒಂದು ಗೊಂದಲದ ಮಧ್ಯದಲ್ಲಿಯೇ **'ಏಕಂ ಸತ್ ವಿಪ್ರಾ ಬಹುಧಾ ವದಂತಿ'** , 'ಸತ್ಯ ಒಂದೇ, ತಿಳಿದವರು ಅದನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ' ಎಂಬ ಉದಾತ್ತ ಧ್ವನಿಯು ಪ್ರತಿಧ್ವನಿಸಿತು. ಈ ಮಹಾಸತ್ಯ ಹಿಂದೂಗಳಾದ ನಮ್ಮ ಜನಜೀವನದ ಉಸಿರಾಗಿದೆ. ಸ್ವಾಮಿ ವಿವೇಕಾನಂದರ ಅಭಿಪ್ರಾಯದಂತೆ ಪ್ರಪಂಚದಲ್ಲಿ ಎಲ್ಲಿಯಾದರೂ ಧಾರ್ಮಿಕ ಭಾವನೆಗಳ ವಿಷಯದಲ್ಲಿ ಸ್ವಲ್ಪ ಸಹಿಷ್ಣುತೆ ಇದ್ದರೆ, ಅದು ಈ ಆರ್ಯಭೂಮಿಯಲ್ಲಿ ಮಾತ್ರ. ಈ ಜಗತ್ತು ಭರತಖಂಡದಿಂದ ಕೇವಲ ಸಹಿಷ್ಣುತೆಯನ್ನು ಮಾತ್ರ ಕಲಿಯುವುದಲ್ಲ, ಸಹಾನುಭೂತಿಯನ್ನೂ ಕಲಿಯಬೇಕು. ಇದು ಶಿವಮಹಿಮ್ನ ಸ್ತೋತ್ರದಲ್ಲಿ ಸುಂದರವಾಗಿ ವ್ಯಕ್ತವಾಗಿದೆ: "ಹಲವು ನದಿಗಳು ಬೇರೆ ಬೇರೆ ಬೆಟ್ಟಗಳಲ್ಲಿ ಹುಟ್ಟಿ, ನೇರವಾಗಿಯೋ ವಕ್ರವಾಗಿಯೋ ಹರಿದು, ಕೊನೆಗೆ ಸಾಗರವನ್ನು ಸೇರುವಂತೆ, ಹೇ ಶಿವನೆ, ಜನರು ತಮ್ಮ ತಮ್ಮ ಸಂಸ್ಕಾರಗಳಿಗೆ ತಕ್ಕಂತೆ ಹಿಡಿಯುವ ಬೇರೆ ಬೇರೆ ಪಥಗಳೂ ಕೂಡ ನಿನ್ನೆಡೆಗೇ ಒಯ್ಯುತ್ತವೆ."

**ಹಿಂದೂಧರ್ಮದ ಪ್ರಮುಖ ವಿಷಯಗಳು:** ವೇದಗಳು ಹಿಂದೂ ಧರ್ಮದ ಆಕರಗ್ರಂಥಗಳು. ವೇದಗಳೆಂದರೆ ಜ್ಞಾನರಾಶಿ. ಅವನ್ನು ಕಂಡುಕೊಂಡವರು ಋಷಿಗಳು. ಋಷಿಗಳು ಮಂತ್ರದ ಭಾವವನ್ನು ತಮ್ಮ ಧ್ಯಾನದಲ್ಲಿ ಆವಿಷ್ಕರಿಸಿದರು. ಜ್ಞಾನವೆಂಬುದು ಅನಾದಿಯಿಂದಲೂ ಈ ವಿಶ್ವದಲ್ಲಿ ಇತ್ತು. ವೇದಗಳು ಕರ್ಮಕಾಂಡದಿಂದ ಆರಂಭವಾಗುತ್ತವೆ, ಜ್ಞಾನಕಾಂಡದಲ್ಲಿ ಪರ್ಯವಸಾನಗೊಳ್ಳುತ್ತವೆ. ಜ್ಞಾನಕಾಂಡವೆಂದರೆ ಉಪನಿಷತ್ತುಗಳು. ಇವೆರಡನ್ನೂ ಸೇರಿ ಶ್ರುತಿ ಎನ್ನುವರು. ಹಿಂದೂಗಳ ಅತಿ ಗ್ರಾಮ್ಯಧರ್ಮದ ಚಿಹ್ನೆಗಳನ್ನು ನೋಡಿದರೂ ಅಲ್ಲಿ ಉಪನಿಷತ್ತಿನ ಭಾವನೆಗಳನ್ನು ಗುರುತಿಸಬಹುದು. ಈ ಭಾವನೆಗಳು ನಮ್ಮ ಜನಜೀವನದಲ್ಲಿ ನೂರಾರು ಬಗೆಯ ಸಂಕೇತಗಳಾಗಿ ಪ್ರವೇಶಿಸಿವೆ, ಜೀವನದ ಅಂಗವಾಗಿ ಹಾಸುಹೊಕ್ಕಾಗಿವೆ. ಸ್ವಾಮೀಜಿಯವರ ಪ್ರಕಾರ ಅವುಗಳಲ್ಲಿ ಬರುವ ಕೆಲವು ಪ್ರಮುಖ ಅಂಶಗಳು, ವೈಶಿಷ್ಟ್ಯಗಳು ಹೀಗಿವೆ:

**೧. ಸೃಷ್ಟಿ :** ಹಿಂದೂಗಳು ಶೂನ್ಯದಿಂದ ಜಗತ್ತಿನ ಸೃಷ್ಟಿಯಾಯಿತು ಎಂದು ಒಪ್ಪುವುದಿಲ್ಲ. ಸಂಸ್ಕೃತದಲ್ಲಿ 'ಸೃಷ್ಟಿ' ಎಂಬ ಪದಕ್ಕೆ Creation ಎಂಬ ಅರ್ಥವಿಲ್ಲ; ಅದಕ್ಕೆ ನಾವು ಬಳಸಬೇಕಾದ ಪದ Projection ಅಥವಾ ಅಭಿವ್ಯಕ್ತಿ. ಜಗತ್ತಿಗೆ ಒಂದು ಆದಿ ಇತ್ತು ಎನ್ನುವುದು ಅಸಮಂಜಸ. ಆದಿ ಅಂತ್ಯಗಳ ಪ್ರಶ್ನೆಯೇ ಇಲ್ಲಿ ಏಳುವುದಿಲ್ಲ.

**೨. ದೇವರು:** ಸೃಷ್ಟಿಗೆ ಕಾರಣ ದೇವರು. ನಮ್ಮಲ್ಲಿ ಅದಕ್ಕೆ 'ಬ್ರಹ್ಮ' ಎಂಬ ಪದವನ್ನು ಉಪಯೋಗಿಸುತ್ತಾರೆ. ಅವನು ನಿತ್ಯ ಶುದ್ಧ ಸದಾ ಜಾಗೃತ ಸರ್ವಶಕ್ತಿಮಾನ್ ಸರ್ವಜ್ಞ ಪರಮದಯಾಮಯ ಸರ್ವವ್ಯಾಪಿ ನಿರಾಕಾರ ಅಖಂಡಸ್ವರೂಪ. ಮಾನವನು ಕರ್ಮಫಲವನ್ನು ಉಣ್ಣುವುದಕ್ಕೆ ದೇವರು ಕಾರಣನಲ್ಲ. ಅದಕ್ಕೆ ಕಾರಣರು ಮತ್ತು ಜವಾಬ್ದಾರರು ನಾವೇ. ದೇವರ ದಯೆ ನಿತ್ಯವಾದುದು. ನಾವೇ ಅದರಲ್ಲಿ ತಾರತಮ್ಯವನ್ನು ತರುವೆವು.

**೩. ಜೀವಿ :** ಭಗವಂತನು ನಿತ್ಯ. ಅದರಂತೆಯೇ ಜೀವಿಯೂ ನಿತ್ಯ. ಅವನು ತನ್ನ ಕರ್ಮವನ್ನು ಸವೆಸಲು ಪ್ರಪಂಚಕ್ಕೆ ಬರುವನು.

ಪೂರ್ವಕರ್ಮಗಳೇ ಜೀವಿಗಳಲ್ಲಿ ಕಂಡುಬರುವ ವ್ಯತ್ಯಾಸಕ್ಕೆ ಕಾರಣ. ಇದೇ ಕರ್ಮನಿಯಮ. ಇದು ನಮಗೆ ಒಂದು ಮಹಾನ್ ಕಟು ಸತ್ಯವನ್ನು ಬೋಧಿಸುವುದು: "ನಾನು ಏನನ್ನು ಅನುಭವಿಸುತ್ತೇನೆಯೋ, ನಾನೇ ಅದಕ್ಕೆ ಕಾರಣ. ನನ್ನ ಅದೃಷ್ಟಕ್ಕೆ ನಾನೇ ಹೊಣೆ. ನಾನೇ ಅದರ ಪರಿಣಾಮ." ಇದು ಜೀವಿಯ ಸ್ವಾತಂತ್ರ್ಯವನ್ನು ಪ್ರತಿಪಾದಿಸುವುದು; ಜೀವಿಯು ಎಂದೂ ಪ್ರಕೃತಿಯ ದಾಸನಾಗಬೇಕಾಗಿಲ್ಲ, ಅವನು ಇಚ್ಛೆಪಟ್ಟರೆ ಪ್ರಕೃತಿ ತಂದೊಡ್ಡುವ ಎಲ್ಲ ಪರಿಸ್ಥಿತಿಗಳನ್ನೂ ಮೀರಬಲ್ಲ ಎನ್ನುವುದನ್ನು ಸೂಚಿಸುವುದು.

**೪. ಆತ್ಮ :** ನಮ್ಮ ಶಾಸ್ತ್ರದ ಪ್ರಕಾರ ಆತ್ಮವನ್ನು ಅರಿಯದೆ ಈಶ್ವರನನ್ನು ಅರಿತುಕೊಳ್ಳಲಾರೆವು. ಮಾನವನ ಆತ್ಮದ ಪರೀಕ್ಷೆಯ ಮೂಲಕವಷ್ಟೇ ನಾವು ದೇವರನ್ನು ಅರಿತುಕೊಳ್ಳಬಹುದು. ಆತ್ಮಕ್ಕೆ ಆದಿ ಅಂತ್ಯಗಳಿಲ್ಲ. ಅದು ಸರ್ವವಿಧ ಶಕ್ತಿ, ಆನಂದ, ಪಾವಿತ್ರ್ಯ, ಸರ್ವವ್ಯಾಪಿತ್ವ ಮತ್ತು ಸರ್ವಜ್ಞತ್ವಗಳನ್ನು ಹೊಂದಿದೆ. ಭರತಖಂಡವು ಬೋಧಿಸುವ ಒಂದು ಅದ್ಭುತ ಸತ್ಯವೆಂದರೆ, ಆತ್ಮವು ಎಲ್ಲ ಜೀವಿಗಳಲ್ಲಿಯೂ ಒಂದೇ ಸಮನಾಗಿ ಇರುತ್ತದೆ ಎಂಬುದು. ನಮ್ಮ ಶಾಸ್ತ್ರವು, "ಒಬ್ಬನೇ ಈಶ್ವರನು ಎಲ್ಲ ಭೂತಗಳಲ್ಲೂ ಇರುವನು. ಹೀಗೆ ತಿಳಿದು ಜ್ಞಾನಿಯು ಎಲ್ಲವನ್ನೂ ಆರಾಧಿಸುವನು" ಎಂದು ಹೇಳುತ್ತದೆ.

**೫. ಈಶ್ವರ :** ನಮ್ಮ ಶಾಸ್ತ್ರದಲ್ಲಿ ಎರಡು ಬಗೆಯ ದೇವರ ಭಾವನೆಗಳು ಇವೆ: ೧. ಸಗುಣ ೨. ನಿರ್ಗುಣ. ವಿಶ್ವಕ್ಕೆ ನಿತ್ಯವಾದ ತಂದೆ ತಾಯಿಗಳ ರೂಪದಲ್ಲಿ ಇರುವವನೇ ಸಗುಣ ದೇವರು. ಅವನು ಪ್ರಕೃತಿ ಮತ್ತು ಜೀವಿಗಳಿಗಿಂತ ಪ್ರತ್ಯೇಕನಾಗಿರುವನು. "ನಾವೇ ಅದು; ನಾವು ಮತ್ತು ಅದು – ಎರಡೂ ಒಂದೇ" ಎಂದು ನಿರ್ಗುಣ ಭಾವನೆ ಹೇಳುತ್ತದೆ. ಎಲ್ಲರೂ ನಿರ್ಗುಣದ ಅಭಿವ್ಯಕ್ತಿಗಳು. ಎಲ್ಲರಿಗೂ ಅದೇ ಮೂಲವಸ್ತು. ಈಶ್ವರನ ಬಗೆಗಿನ ಭಾರತೀಯ ಚಿಂತನೆಯ ವೈಶಿಷ್ಟ್ಯವನ್ನು ಸ್ವಾಮೀಜಿ ಹೀಗೆ ತೆರೆದಿಡುತ್ತಾರೆ: "ಜಗತ್ತಿನಲ್ಲಿ ಪ್ರೀತಿಸುವುದಕ್ಕೆ ಒಬ್ಬ ಪರಮೇಶ್ವರ ಬೇಕಾಗಿದ್ದರೆ, ಇನ್ನೂ ಇದುವರೆಗೆ ಕಲ್ಪಿಸಿಕೊಳ್ಳದಂತಹ ಪರಮೋತ್ಕೃಷ್ಟ ಪರಮೇಶ್ವರನ ಭಾವನೆ ಇಲ್ಲಿದೆ. ಒಬ್ಬನು ವಿಚಾರವಾದಿಯಾಗಿ ಯುಕ್ತಿಯನ್ನು ತೃಪ್ತಿಪಡಿಸಿಕೊಳ್ಳಬಯಸಿದರೆ, ನಿರ್ಗುಣ ಬ್ರಹ್ಮನ ವಿಚಾರವಾಗಿ ಯುಕ್ತಿಯುಕ್ತ ಭಾವನೆಗಳೂ ಇಲ್ಲಿವೆ."

**೬. ತತ್ತ್ವಗಳ ಮೇಲೆ ನಿಂತ ಧರ್ಮ:** ಹಿಂದೂಧರ್ಮವೊಂದೇ ತತ್ತ್ವಗಳ ಮೇಲೆ ನಿಂತಿರುವ ಧರ್ಮ; ಉಳಿದವೆಲ್ಲ ಐತಿಹಾಸಿಕ ವ್ಯಕ್ತಿಗಳ ಮೇಲೆ ನಿಂತಿವೆ. ಹೀಗೆ ಸಾರತಃ ನಮ್ಮ ಧರ್ಮವು ಅಲೌಕಿಕವಾಗಿದ್ದರೂ ಇಲ್ಲಿ ವ್ಯಕ್ತಿಗಳ ಪಾತ್ರಕ್ಕೂ ಬಹಳ ಅವಕಾಶವಿದೆ. ಹಾಗೆಂದೇ ನಮ್ಮ ಧರ್ಮದಲ್ಲಿ ಅನೇಕ ಅವತಾರಪುರುಷರು, ಮಹಾತ್ಮರು ಹುಟ್ಟಿ ಬಂದಿದ್ದಾರೆ.

**೭. ವೈಜ್ಞಾನಿಕ ದೃಷ್ಟಿಕೋನ:** ವೇದಾಂತದ ಬೋಧನೆಗಳು ಮಾತ್ರವೇ ಆಧುನಿಕ ವೈಜ್ಞಾನಿಕ ಅನ್ವೇಷಣೆಗಳೊಂದಿಗೆ ಸಂಪೂರ್ಣವಾಗಿ ಹೊಂದಿಕೆಯಾಗಿವೆ; ಹೀಗೆ ಅವು ಮಾತ್ರವೇ ಯುಕ್ತಿಯುಕ್ತವಾಗಿವೆ ಎಂದು ಸ್ವಾಮೀಜಿ ಪ್ರತಿಪಾದಿಸುತ್ತಾರೆ.

**೮. ನೀತಿತತ್ತ್ವ :** ನೀತಿಗೆ ಪ್ರಮಾಣವಾಗಿ ಶಾಶ್ವತ ತತ್ತ್ವವೊಂದರ ಆವಶ್ಯಕತೆ ಇದೆ. ಸ್ವಾಮೀಜಿಯವರ ಪ್ರಕಾರ ಎಲ್ಲರಲ್ಲೂ, ಜಗತ್ತಿನ ಪ್ರತಿಯೊಂದರಲ್ಲೂ ಇರುವ ಏಕಾತ್ಮವನ್ನು ಸಾರುವ ನಿರ್ಗುಣ ಬ್ರಹ್ಮತತ್ತ್ವದಿಂದ ಮಾತ್ರ ಯಾವುದೇ ಬಗೆಯ ನೀತಿತತ್ತ್ವವನ್ನು ಪ್ರತಿಪಾದಿಸುವುದು ಸಾಧ್ಯ. "ಇತರರನ್ನು ನಿಮ್ಮಂತೆಯೇ ನೋಡಿ, ನಿಮ್ಮಂತೆಯೇ ಪ್ರೀತಿಸಿ" ಎಂಬ ಬೋಧನೆಗೆ ನಿರ್ಗುಣ ಬ್ರಹ್ಮವಾದದಲ್ಲಿ ಮಾತ್ರ ವಿವರಣೆ ಸಿಕ್ಕುವುದು. "ಈ ಸೃಷ್ಟಿಯೆಲ್ಲಾ ಒಂದೇ ಆಗಿದೆ, ಎಲ್ಲ ಜೀವನವೂ ಒಂದೇ... ನಾನು ಮತ್ತೊಂದನ್ನು ಪೀಡಿಸಿದರೆ ನನ್ನನ್ನು ನಾನೇ ಪೀಡಿಸಿಕೊಳ್ಳುತ್ತಿರುವೆನು. ಅನ್ಯರನ್ನು ಪ್ರೀತಿಸಿದರೆ ನನ್ನನ್ನು ನಾನೇ ಪ್ರೀತಿಸುತ್ತಿರುವೆನು" ಎನ್ನುವುದೇ ಆ ವಿವರಣೆ. ಸ್ವಾಮೀಜಿಯವರ ಪ್ರಕಾರ ನಿರ್ಗುಣ ಬ್ರಹ್ಮವಾದದ ಈ ವಿವರಣೆ ಮಾತ್ರವೇ ನೀತಿಗೆ ಆಧಾರವಾಗಬಲ್ಲದು. ಅದಲ್ಲದೆ ಅಮೆರಿಕಾ ಮತ್ತು ಯೂರೋಪಿನ ಎಲ್ಲ ಆಧುನಿಕ ಮತ್ತು ಸಾಮಾಜಿಕ ಚಳುವಳಿಗಳ ಮೂಲತತ್ತ್ವವಾಗಬಲ್ಲುದು.

**೯. ಅನಂತ ಶಕ್ತಿ :** ಈ ನಿರ್ಗುಣ ಬ್ರಹ್ಮವಾದವು ಬೋಧಿಸುವ ಮಹಾನ್ ಆತ್ಮದ ಪರಿಕಲ್ಪನೆಯು ನಮಗೆ ಅಪಾರಶಕ್ತಿಯ ಭಾವನೆಯನ್ನು ತಂದುಕೊಡುವುದು. ಹಾಗೆಯೇ "ಅನಂತಜ್ಞಾನ, ಪವಿತ್ರತೆ, ಸ್ವಾತಂತ್ರ್ಯ – ಇವೆಲ್ಲವೂ ನನ್ನಲ್ಲಿಯೇ ಇದೆ" ಎಂಬ ಸತ್ಯದ ಅರಿವು ಮಾಡಿಸುವುದು. ಮನುಷ್ಯನನ್ನು ಯಾವುದು ಕಾರ್ಯೋನ್ಮುಖವನ್ನಾಗಿ ಮಾಡುತ್ತದೆಯೋ ಅದೇ ಶಕ್ತಿ. ಶಕ್ತಿಯೇ ಪುಣ್ಯ, ದೌರ್ಬಲ್ಯವೇ ಪಾಪ. ಭಯವೇ ದುಃಖದ ಮೂಲ, ಸಾವಿನ ಮೂಲ, ಅನಂತ ಪಾಪಗಳ ಮೂಲ.

**೧೦. ಇಷ್ಟದೇವತಾ ಸಿದ್ಧಾಂತ:** ಧರ್ಮದ ಅನುಷ್ಠಾನಕ್ಕೆ ನಮ್ಮ ಶಾಸ್ತ್ರಗಳು ತುಂಬ ಪ್ರಾಮುಖ್ಯತೆಯನ್ನು ನೀಡಿವೆ. ಭಗವಂತನ ಉಪಾಸನೆಯನ್ನು ನಾವು ಇಷ್ಟಪಡುವ ರೂಪದಲ್ಲಿ ಮಾಡುವ ಸ್ವಾತಂತ್ರ್ಯವನ್ನು ಅವು ನಮಗೆ ಕೊಟ್ಟಿವೆ. ಅದೇ ಇಷ್ಟದೇವತಾ ಸಿದ್ಧಾಂತ. ವೈವಿಧ್ಯವೇ ಜೀವನದ ರಹಸ್ಯ ಎನ್ನುವುದನ್ನು ಇದು ಸೂಚಿಸುತ್ತದೆ. ಸ್ವಾಮೀಜಿ ಹೀಗೆ ಹೇಳುತ್ತಾರೆ: "ಯಾವ ಯಾವ ವಿಗ್ರಹ ಮಂತ್ರ, ಆಚಾರ ನಿಮ್ಮನ್ನು ದೇವರ ಸಮೀಪಕ್ಕೆ ಒಯ್ಯುವುವೋ ಅವನ್ನೆಲ್ಲ ಸ್ವೀಕರಿಸಿ. ಆದರೆ ಅವಕ್ಕಾಗಿ ಹೋರಾಡಬೇಡಿ. ನೀವು ಕಾದಾಡುವುದಕ್ಕೆ ಪ್ರಾರಂಭಿಸಿದೊಡನೆ ದೇವರಿಗೆ ವಿಮುಖರಾಗುವಿರಿ."

**೧೧. ತ್ಯಾಗಜೀವನ :** ನಮ್ಮ ದೇಶದ ಧರ್ಮದ ಧ್ಯೇಯವಾಕ್ಯವೇ 'ತ್ಯಾಗ.' ಆದ್ದರಿಂದ ಸ್ವಾಮೀಜಿ ಹೀಗೆ ಕರೆ ಕೊಡುತ್ತಾರೆ: "ತ್ಯಾಗ ಜೀವನವನ್ನು ತೋರಿ, ಆಧ್ಯಾತ್ಮಿಕ ಜೀವನವನ್ನು ತೋರಿ, ಸಹಿಷ್ಣುತಾ ಜೀವನವನ್ನು ತೋರಿ, ಅಪಾರವಾದ ಪ್ರೇಮಜೀವನವನ್ನು ತೋರಿ – ಇದೇ ಆಧ್ಯಾತ್ಮಿಕ ಪುರುಷನ ಲಕ್ಷಣ."

**೧೨. ಸೇವೆ:** ಪವಿತ್ರ ಕ್ಷೇತ್ರವಾದ ರಾಮೇಶ್ವರದಲ್ಲಿ ಸ್ವಾಮೀಜಿ ಹೀಗೆ ಕರೆಕೊಟ್ಟರು: "ಧರ್ಮ ಇರುವುದು ಪ್ರೀತಿಯಲ್ಲಿ, ಬಾಹ್ಯಾಚಾರದಲ್ಲಿ ಅಲ್ಲ. ಧರ್ಮಕ್ಕೆ ಶುದ್ಧ ನಿಷ್ಕಪಟ ಹೃದಯವೇ ಮುಖ್ಯ... ಇವಿಲ್ಲದೆ ಒಬ್ಬನು ದೇವಸ್ಥಾನಕ್ಕೆ ಬಂದು ಪ್ರಾರ್ಥಿಸಿದರೆ ಪ್ರಯೋಜನವಿಲ್ಲ... ನಾವು ಸ್ವತಃ ಪರಿಶುದ್ಧರಾಗಿರುವುದು, ಇತರರಿಗೆ ಒಳ್ಳೆಯದನ್ನು ಮಾಡುವುದು – ಇದೇ ಎಲ್ಲ ಪೂಜೆಯ ಸಾರ. ಯಾರು ದೀನರಲ್ಲಿ, ದುರ್ಬಲರಲ್ಲಿ, ರೋಗಿಗಳಲ್ಲಿ ಶಿವನನ್ನು ನೋಡುವರೋ ಅವರೇ ನಿಜವಾಗಿ ಶಿವನನ್ನು ಪೂಜಿಸುವವರು. ಒಬ್ಬನು ಕೇವಲ ವಿಗ್ರಹದಲ್ಲಿ ಮಾತ್ರ ಶಿವನನ್ನು ನೋಡಿದರೆ, ಅವನ ಪೂಜೆ ಬರಿಯ ಗೌಣ. ಜಾತಿ–ಕುಲ–ಗೋತ್ರಗಳನ್ನು ಲೆಕ್ಕಿಸದೆ